

## ಕೌಶಿಕಿ ಸಂಗೀತಲೋಕ

ಮೇ 28ರ ಸಂಚಿಕೆಯಲ್ಲಿ ಉಮಾ ಅನಂತ್ ಮಾಡಿದ 'ಕೌಶಿಕಿ ಚಕ್ರವರ್ತಿ' ಸಂದರ್ಶನ ಸಂಗೀತದ ವಿಶಿಷ್ಟ ಲೋಕಕ್ಕೆ ಕರೆದೊಯ್ದಿತು. ಸಂಗೀತ ಕ್ಷೇತ್ರದಲ್ಲಿ ಅಷ್ಟು ಹೆಸರು ಗಳಿಸುವಲ್ಲಿ ಅವರ ಅಭ್ಯಾಸ, ಶ್ರಮ, ಧ್ಯಾನ, ಯೋಗ ಇವೆಲ್ಲದರ ಬಗ್ಗೆ ತಿಳಿದು ಇನ್ನಷ್ಟು ಗೌರವ ಮೂಡಿತು. ಜೊತೆಗೆ ಯೂಟ್ಯೂಬ್‌ನಲ್ಲಿನ ಅವರ 'ಭೀಮ್‌ಪಲಾಸಿ' ವಿಸ್ತಾರವಾದ ದೃಶ್ಯ ಮನಸೆಳೆಯಿತು.

—ಸುಬ್ಬಲಕ್ಷ್ಮಿ ಎಚ್.ಕೆ., ಕೋಲಾರ

ಇಲ್ಲಿ ಬಾಳಿ, ಸಂಗೀತದ ರಸದೌತಣ ನೀಡಿದ ಮಹಾನ್ ಗಾಯಕರು ಕೀರ್ತಿಶೇಷರಾದಾಗ ಉನ್ನತ ಸಂಗೀತದ ಝರಿ ಬತ್ತಿ ಹೋಯಿತು ಎಂದು ವ್ಯಾಕುಲಪಡುತ್ತೇವೆ. ಆದರೆ ಈ ಪ್ರಕೃತಿಯು ಅವಿಚ್ಛಿನ್ನವಾಗಿ, ಹೊಸದಾದ ದೈವದತ್ತ ಗಾಯಕರನ್ನು ಸೃಷ್ಟಿಸುತ್ತಲೇ ಇರುತ್ತದೆ. ಇದಕ್ಕೆ ಅನುಸಾರವಾಗಿ ಕೌಶಿಕಿ ಚಕ್ರವರ್ತಿ ಅವರ ಗಾಯನ ಮಾಧುರ್ಯವನ್ನು ಆಸ್ವಾದಿಸುವ ಸೌಭಾಗ್ಯ ನಮಗೆ ದೊರಕಿದೆ.

—ಬಿ. ಭಾರ್ಗವ ರಾಮ್, ಬೆಂಗಳೂರು

## ಮುಂಜಾನೆ ಚಿತ್ರಾಲಾಪ

ಜೂನ್ 4ರ ಸಂಚಿಕೆಯಲ್ಲಿ ಪ್ರಕಟವಾದ 'ಮುಸುಕಿದೀ ಮಂಜಿನಲಿ' ಚಿತ್ರಕಥನ ಮನ ಸೆಳೆದೇಬಿಟ್ಟಿತು. ಮುಂಜಾನೆಯ ಫೋಟೊಗಳಂತೂ ಮನಮೋಹಕ. ವಾಹನದಲ್ಲಿ ನಾನೂ ಮುಂಜಾನೆ ನಾಲ್ಕರಿಂದ ಐದಾರು ಗಂಟೆ ಸುಮಾರಿಗೆ ಚಳಿಗಾಲದಲ್ಲಿ ಆಗುಂಬೆಯತ್ತ ಹೋದಾಗ ಇದರಲ್ಲಿ ಇದ್ದಂತಹ ದೃಶ್ಯಗಳನ್ನು ಆಸ್ವಾದಿಸಿದ್ದೆ. ದಿನೇಶ್ ಮಾನೀರ್ ನಿರೂಪಣೆಯೂ ಚೆನ್ನಾಗಿದೆ.

—ಪಿ. ವಾಸುದೇವ ಭಟ್, ಉಡುಪಿ



## ಸುಂದರ ಕಥೆ

ಮೇ 28ರ ಸಂಚಿಕೆಯಲ್ಲಿ ಪ್ರಕಟವಾದ ದೀಪದ ಮಲ್ಲಿ ಅವರ 'ತನು' ಕಥೆ ಹೆಣ್ಣಿನ ಅಸಹಾಯಕತೆಯನ್ನು ಸೂಚ್ಯವಾಗಿ ಅನಾವರಣಗೊಳಿಸುತ್ತದೆ. ಈ ಕಥೆ ಹಲವಾರು ಆಯಾಮಗಳನ್ನು ಹೊಂದಿದೆ. ಬಾಡಿಗೆ ತಾಯಂದಿರ ಕಷ್ಟಗಳು, ಶೋಷಣೆ, ಆಸೆಗಳನ್ನು ಅದುಮಿಡುವ ಅನಿವಾರ್ಯತೆ ಇತ್ಯಾದಿ ಇತ್ಯಾದಿ. ಮನಕಲಕಿಸುವ ಕಥೆಗಾಗಿ ಧನ್ಯವಾದಗಳು.

—ಡಾ. ಕೆ. ಎಸ್. ಗಂಗಾಧರ, ಶಿವಮೊಗ್ಗ

ದೀಪದ ಮಲ್ಲಿಯವರ ಕಥೆ 'ತನು' ಆಧುನಿಕ ಜಗತ್ತಿನ ಅರಗಿಸಿಕೊಳ್ಳಲಾಗದ ಸತ್ಯವೊಂದನ್ನು ತೆರೆದಿಟ್ಟಿದೆ. ಅಲ್ಪ ಹಣಕ್ಕಾಗಿ ತಮ್ಮ ಗರ್ಭವನ್ನೂ ಬಾಡಿಗೆ ನೀಡುವ 'ತನುಜಾ'ಳಂಥವರ ಭಾವನೆಗಳಿಗೆ ಬೆಲೆಯೆಲ್ಲಿದೆ?

—ಟಿ.ಎಸ್. ಕುಪ್ಪಣ್ಣ, ಶಕ್ತಿನಗರ

## ಪತ್ತನಾಜೆ

ಮೇ 28ರ ಸಂಚಿಕೆಯಲ್ಲಿ ಪ್ರಕಟವಾದ, ಕರಾವಳಿಯ ಜನ ಶ್ರದ್ಧೆ ಭಕ್ತಿಯಿಂದ ಆಚರಿಸುವ, ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿರಾಮ ನೀಡಿ ಕೃಷಿ ಸಂಬಂಧಿ ಚಟುವಟಿಕೆ ಆರಂಭಿಸುವ, ಪ್ರಕೃತಿಗೂ ಮನುಷ್ಯರಿಗೂ ನೇರವಾಗಿ ಸಂಬಂಧವಿರುವ 'ಪತ್ತನಾಜೆ' ಚಿತ್ರಣ ನೀಡಿದ ಅಶ್ವಿನಿ ಮೂರ್ತಿ ಅಯ್ಯನಕಟ್ಟೆ ಅವರ ಲೇಖನ ಖುಷಿಕೊಟ್ಟಿತು.

—ಪಿ. ಜಯವಂತ ಪೈ, ಕುಂದಾಪುರ



## ಕಲೆ ಕಹಿ ಸತ್ಯ ಹೇಳುವುದಕ್ಕೆ

'ಕಲೆ ಕಹಿ ಸತ್ಯ ಹೇಳುವುದಕ್ಕೆ' (ಮೇ 28. ರೂಪಾ ಕೆ.ಎಂ.) ಸಂದರ್ಶನಕ್ಕೆ ಪ್ರತಿಕ್ರಿಯೆ ಫವಾಸ್ ರೇಹಾನ್ ಕ್ಯಾಮೆರಾ ಮೂಲಕ ತೋರಿಸಹೊರಟಿರುವುದು ಕಲೆ ಅಲ್ಲ; ಜೀವ ವಿರೋಧಿ ಭಾವ ಹಾಗೂ ಹಿಂಸಾರಸಿಕತೆ. ಫವಾಸ್ ಹೇಳುವ ಹಾಗೆ ಬದುಕು ಖಂಡಿತ ಸಂಭ್ರಮದ ಮೂಟೆಯಲ್ಲ. ಬದುಕಿನ ಕಷ್ಟ, ನೋವು, ಕ್ರೌರ್ಯ, ಸಂಕಟಗಳನ್ನು ಕಲೆಯ ಮೂಲಕ ಹೇಳಿಕೊಳ್ಳಲೇಬೇಕು. ಆದರೆ ಹಾಗೆ ಕಲಾವಿದ ಹೇಳಿಕೊಂಡಾಗ ಆ ಕಲಾಕೃತಿ ನೋಡುಗನಲ್ಲಿ ದುಃಖ, ಸಂಕಟ, ತಳಮಳವನ್ನು ಹುಟ್ಟಿಸಿ, ಬದುಕಿನ ವಾಸ್ತವತೆಯನ್ನು ತೆರೆದಿಡಬೇಕೆ ಹೊರತು ಬದುಕಿನ ಕುರಿತ ದ್ವೇಷವನ್ನಲ್ಲ.

—ಸುಘೋಷ ಎಸ್. ನಿಗಳೆ, ಬೆಂಗಳೂರು

ಫವಾಸ್ ಅವರ ಚಿತ್ರಗಳನ್ನು ಕಲೆ ಎಂದು ಒಪ್ಪುವುದು ಕಷ್ಟ. ಕಲೆ ಎಂದರೆ ಮನಸ್ಸು ಅರಳಬೇಕೇ ಹೊರತು ಕೆರಳಬಾರದು. ಕೆರಳಿಸುವ ಉದ್ದೇಶದಿಂದಲೇ ರಚಿಸಿದ ಚಿತ್ರಗಳು ಕೀಳು ಅಭಿರುಚಿಯವಾಗಿರುತ್ತವೆ. ಇಂಥವರಿಗೆ ಪ್ರಚಾರ ಕೊಟ್ಟು ಪ್ರಸಿದ್ಧಿಗೆ ತರಬಾರದು. ಮೊದಲ ಚಿತ್ರದಲ್ಲೇ ಆ ಛಾಯಾಗ್ರಾಹಕನ ಆಲೋಚನೆ ಹೇಗಿದೆ ತಿಳಿಯುತ್ತದೆ. ಈ ಚಿತ್ರಗಳು ನನ್ನ ಮನಸ್ಸಿಗೆ ಬಹಳ ನೋವನ್ನು ತಂದಿತು.ನನ್ನ ಸಾತ್ವಿಕ ಕ್ರೋಧವನ್ನು ದಾಖಲಿಸುತ್ತಿದ್ದೇನೆ.

—ಸು. ನಾಗರಾಜ್

## ಸೋಷಿಯಲ್ ಮೀಡಿಯಾ ಚಾಲೆಂಜ್

ಮೇ 28ರ ಸಂಚಿಕೆಯಲ್ಲಿ ಡಿ.ಎಂ. ಘನಶ್ಯಾಮ ಬರೆದಿರುವ 'ಸೋಷಿಯಲ್ ಮೀಡಿಯಾ ಚಾಲೆಂಜ್' ಲೇಖನ ಓದಿದೆ. ಈಗ ಸೋಷಿಯಲ್ ಮೀಡಿಯಾಗಳು ಜನರ ಮೇಲೆ ಬೀರಿರುವ ಪರಿಣಾಮ ಅಚ್ಚರಿ ತರಿಸುತ್ತದೆ. ಪ್ರಸ್ತುತ ಸಂಗತಿಯ ಮೇಲೆ ಅವಲಂಬಿತವಾದ ಪ್ರಚಾರ, ಕೆಲವು ರೀತಿಯ ರಿಸ್ಕ್‌ಗಳಿಗೂ ಕಾರಣವಾಗುತ್ತವೆ. ಯುವಜನತೆ ಇಂತಹ ಮರೀಚಿಕೆಗಳ ಬೆನ್ನು ಹತ್ತದೆ ನೈಜತೆಗೆ ಒತ್ತು ನೀಡುವುದು ಅವಶ್ಯವೆನಿಸುತ್ತದೆ. ಲೇಖನದಲ್ಲಿ ಉದಾಹರಣೆ ಮೂಲಕ ದುಷ್ಪರಿಣಾಮಗಳ ಬಗ್ಗೆಯೂ ಗಮನಸೆಳೆದಿದ್ದಲ್ಲಿ ಸಣ್ಣ ಎಚ್ಚರಿಕೆಯಾಗುತ್ತಿತ್ತು.

—ವೆಂಕಟೇಶ.ಎಂ.ಎ., ದಾವಣಗೆರೆ

## ಚರ್ಮದ ಬ್ಯಾಂಕ್

ಮೇ 28ರ ಸಂಚಿಕೆಯಲ್ಲಿ ಡಾ. ವಿನಯ ಶ್ರೀನಿವಾಸ್ ಬರೆದಿರುವ 'ಚರ್ಮದ ಬ್ಯಾಂಕ್' ಬಗೆಗಿನ ಲೇಖನ ಮಾಹಿತಿಪೂರ್ಣವಾಗಿದೆ. ದಾನಿಯಿಂದ ಸಂಗ್ರಹಿಸಿದ ಚರ್ಮವನ್ನು ಹೆಚ್ಚಿನ ಸಂದರ್ಭಗಳಲ್ಲಿ ತೀವ್ರ ಸ್ವರೂಪದ ಸುಟ್ಟಗಾಯಗಳ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ. ಲೇಖನದಲ್ಲಿ ಸೂಚಿಸಿದ ಇತರ ಸಂದರ್ಭಗಳಲ್ಲಿ ರೋಗಿಯ ಆರೋಗ್ಯಕರ ದೇಹದ ಭಾಗದಿಂದ ತೆಗೆದ ಚರ್ಮದ ಬಳಕೆಯೇ ಹೆಚ್ಚು ಸೂಕ್ತವೆನಿಸುತ್ತದೆ. ಅಂತೆಯೇ ಪ್ಲ್ಯಾಸ್ಟಿಕ್ ಸರ್ಜನ್ ಅಥವಾ ಸುಟ್ಟಗಾಯಗಳ ಶಸ್ತ್ರ ಚಿಕಿತ್ಸಾ ತಜ್ಞರು ಚರ್ಮದ ಕಸಿ ಮಾಡುವುದರಲ್ಲಿ ಪರಿಣತಿ ಹೊಂದಿರುತ್ತಾರೆ.

—ಡಾ. ಶಿರೋಳ ಎಸ್. ಎಸ್., ಹುಬ್ಬಳ್ಳಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in